

ಬೆಂಗಳೂರಾದರೇನು ‘ಸೀತಾನದಿ’ಯಾದರೇನು... ಏನಿದ್ದರೂ ವಾರಪಕ್ಷಗಳಿಗೊಂದಾವರ್ತಿ ಸ್ಕೈಪು–ಫೇಸ್‌ಟೈಮುಗಳ ಮಾತುಕತೆ ತಾನೇ... ಅಂದುಕೊಂಡು ಸುಮ್ಮಗುಳಿದೆವು.

★★★

‘ಸೀತಾನದಿ’ ಸದಾಸರ್ವದಾ ಹಸಿರಿರುವ ಮಲೆನಾಡಿನ ಒಳಾಂತರವನ್ನು ಹೊಕ್ಕುಕೊಂಡಿರುವ ಒಂದು ಹೋಬಳಿ. ಅದೇ ಹೆಸರಿನ ನದಿಯ ಮಗ್ಗುಲಿಗಿದೆಯಾಗಿ ಈ ಹೆಸರು. ಬಾಳೆಹೊನ್ನೂರಿಗೂ ಕೊಪ್ಪಕ್ಕು ನಡುವಿರುವ ರಸ್ತೆಯಲ್ಲಿ, ಜಯಪುರವಾಗುತ್ತಲೇ ಸಿಗುವ ಬಲಗಡೆಯ ಎರಡನೇ ಕೈಮರದ ನೇರಕ್ಕೆ ಹೊರಳಿ, ಘಟ್ಟವಿಳಿಯುವ ಒಳದಾರಿಯಲ್ಲಿ ಹೋದರೆ ದಾರಿ ಕೊನೆಗೊಳ್ಳುವಲ್ಲಿರುವುದೇ, ‘ಸೀತಾನದಿ’. ಮಲೆನಾಡಿನ ಬೆಟ್ಟಗಳ ನಡುಬಳಸಿಕೊಂಡಿಳಿಯುವಾಗ–ಸುಮಾರು ಇನ್ನೂರಿನ್ನೂರೈವತ್ತು ಮನೆಗಳಿರುವ ಹೆಂಚುಸೂರಿನ ಈ ಊರು, ಹಸಿರೊಡಲಿನಲ್ಲಿ ಕೆಂಪುಕೆಂಪಗೆ ಬೊಟ್ಟಿರಿಸಿದ ಸೆರಗಿನ ಹಾಗೆ, ಚಿತ್ರಕವಾಗಿ ತೋರಿಬರುತ್ತದೆ. ಅದೇ ರಸ್ತೆಯಲ್ಲಿ ಊರು ದಾಟಿದ್ದೇ ಸಿಗುವುದು, ಹಿರಿತುಂಗೆಯ ಕಿರಿಮರಿಯೆನಿಸುವ ಹಾಗೆ ತೋರುವ ‘ದಿಟದ’ ಸೀತಾನದಿ. ಹೆಚ್ಚೇನೂ ಅಗಲದ್ದಲ್ಲ ಈ ನದಿ; ಹಾಗಂತ ಹಳ್ಳವೋ ತೊರೆಯೋ ಅನ್ನಬಹುದಾದದ್ದೂ ಅಲ್ಲ. ಕಣಿವೆಯಲ್ಲಿ ತಣ್ಣಗೆ ಹರಿದುಕೊಂಡಿರುವ ಇದರ ನೀರಹಾದಿ, ದಂಡೆಯಿಂದ ದಂಡೆಗೆ ಐವತ್ತಡಿಯಿದ್ದೀತು ಅಷ್ಟೆ. ಆಚೀಚಿನ ತೀರಗಳನ್ನು ಕಳೆದಲ್ಲಿ, ಹೊಳೆಯ ಸರಾಸರಿ ಹರಿವು ಇಪ್ಪತ್ತೈದಿದ್ದೀತು... ‘ಸೀತಾನದಿ’ಯೆಂಬ ಊರು ದಾಟಿದ ರಸ್ತೆಯು ‘ಸೀತಾ’ನದಿಯನ್ನು ಕ್ರಮಿಸುವ ಹಾಗೊಂದು ಕಿರಿದಾದ ಸೇತುವೆಯಿದೆ. ಬ್ರಿಟಿಷರ ಕಾಲದ್ದು; ಕಾಂಕ್ರೀಟಿನದ್ದಲ್ಲ. ಆಚೀಚೆಗಿರುವ ದೊಡ್ಡ ದೊಡ್ಡ ದಪ್ಪಗಲ್ಲಿನ ಗೋಡೆಗಳ ಮೇಲೆ ಉಕ್ಕಿನ ಹಳಿಗಳನ್ನು ತೊಲೆಯ ಹಾಗೆ ಹರವಿ ಮಾಡಲಾಗಿದೆ. ಹಳತಾದರೂ ಅತಿಶಿಥಿಲವೇನನ್ನಿಸದ ಈ ಸೇತುವೆಯನ್ನು ಆಚೀಚಿನ ಕಾಡುಗಳ ನಡುವಿದ್ದು ನೋಡಿದಲ್ಲಿ, ಕಲೆಯ ಕುಂಚದಲ್ಲರಳಿದ ಅದ್ಭುತ ಕಲಾಕೃತಿಯೇ ಅನ್ನಿಸೀತು, ಅಂತಿದೆ!

‘ಸೀತಾನದಿ’ಯ ಮುಖ್ಯರಸ್ತೆಯು ಸೇತುವೆಯನ್ನು ದಾಟಿದ್ದೇ, ಇನ್ನಷ್ಟು ಕಡಿದುಗೊಂಡು ಮುನ್ನಡೆದು ‘ಕಡೆಗದ್ದೆ’ಯೆಂಬೊಂದು ಹಳ್ಳಿಯಲ್ಲಿ ಕೊನೆಗೊಳ್ಳುತ್ತದೆ. ‘ಸೀತಾನದಿ’ಗೂ ಕಡೆಗದ್ದೆಗೂ ಕಾಲ್ನಡಿಗೆಯಲ್ಲಿ ಮುಕ್ಕಾಲು ತಾಸಿನ ದಾರಿ. ಕಡೆಗದ್ದೆಗೆ ತುಸುವೇ ಮೊದಲು, ರೋಡಿಗಂಟಿಕೊಂಡಿರುವ ಹಾಗೆ, ನನ್ನ ತೋಟವಿದೆ. ತೋಟವೆಂದರೆ ತೋಟವೇ ಅಂತೇನಲ್ಲ. ಹುಟ್ಟಾಕಟ್ಟಾ ನಗರಸ್ಥನಾದ ನನಗೆ ತೋಟಗದ್ದೆಗಳ ವಿಷಯ ತಾನೇ ಎಲ್ಲಿ ಅರ್ಥವಾದೀತು?